07 ಮಾರ್ಚ್ 2014

# ಕ್ರಿಕೆಟ್ ಮೂಲಕ ರಾಷ್ಟ್ರೀಯತೆ

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

1999ನೇ ಇಸವಿ, ಕಾರ್ಗಿಲ್ ಕದನದ ಸಂದರ್ಭ. ವಿಶ್ವ ಕಪ್ ಕ್ರಿಕೆಟ್ ಇಂಗ್ಲೆಂಡ್‌ನಲ್ಲಿ ನಡೆಯುತ್ತಿತ್ತು. ಬೇಸಿಗೆ ರಜದ ಮೇಲೆ ನಾನು ನನ್ನ ಕುಟುಂಬದೊಂದಿಗೆ ಅಲ್ಲಿಗೆ ಹೋಗಿದ್ದೆ. ಒಂದು ಕ್ರೀಡಾಂಗಣದಿಂದ ಮತ್ತೊಂದು ಕ್ರೀಡಾಂಗಣಕ್ಕೆ ತೆರಳುತ್ತ ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸುತ್ತಿದ್ದೆವು. ಸೆಮಿ ಫೈನಲ್ ಹಂತದಲ್ಲಿ ಭಾರತ ತಂಡ ಪಂದ್ಯದಿಂದ ಹೊರ ನಡೆದಿತ್ತು.

ಪಾಕಿಸ್ತಾನದೊಂದಿಗೆ ಭಾರತದ ಪ್ರಮುಖ ಪಂದ್ಯವೊಂದು ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ಆಡಲಾಯಿತು. ಕಾರ್ಗಿಲ್ ಯುದ್ಧದ ಹಿನ್ನಲೆಯಲ್ಲಿ, ಭಾರತ-ಪಾಕ್ ಕ್ರಿಕೆಟ್ ಪಂದ್ಯಕ್ಕೆ ವಿಶೇಷ ಮಹತ್ವ ದೊರೆತಿತ್ತು. ಕ್ರೀಡಾಂಗಣದಲ್ಲಿ ಒತ್ತಡ ಎದ್ದು ಕಾಣುತ್ತಿತ್ತು. ಪ್ರೇಕ್ಷಕರಲ್ಲಿ ಹಲವರು ಭಾರತ ಧ್ವಜದ ವರ್ಣಾಲಂಕಾರ ಹೊಂದಿದ್ದರು ಅಥವಾ ಪಾಕಿಸ್ತಾನದ ಅಂಗವಸ್ತ್ರವನ್ನು ಧರಿಸಿದ್ದರು. ಈ ಎರಡೂ ದೇಶಗಳ ರಾಷ್ಟ್ರ ಧ್ವಜಗಳನ್ನು ನೂರಾರು ಪ್ರೇಕ್ಷಕರು ಆಡಿಸುತ್ತಿದ್ದರು. ಭಾರತ ಮೂಲದ ಯುವಕರ ಒಂದು ಸಮೂಹ ನನ್ನನ್ನು ಗುರುತಿಸಿ ಉತ್ಸಾಹದ ಸಂಭಾಷಣೆಯಲ್ಲಿ ತೊಡಗುತ್ತ, ಭಾರತ ತಂಡ ಗೆಲ್ಲುವ ಸಾಧ್ಯತೆಗಳನ್ನು ವಿಶ್ಲೇಷಿಸುತ್ತಿದ್ದರು. ಅವರಲ್ಲಿ ಹಲವರು ಬ್ರಿಟೀಷ್ ದೇಶದ ಪಾಸ್‌ಪೋರ್ಟ್ ಹೊಂದಿದ್ದು, ಬ್ರಿಟೀಷ್ ಪೌರತ್ವ ಪಡೆದವರಾಗಿದ್ದರು. ಕೆಲವರು ಯುಗಾಂಡ ಮತ್ತು ಕೀನ್ಯದಿಂದ ವಲಸೆ ಬಂದ ಗುಜರಾತಿಗಳಾಗಿದ್ದರು. ಕ್ರಿಕೆಟ್ ಪಂದ್ಯಗಳಲ್ಲಿ ಅವರು ಯಾರ ಪರ ಘೋಷಣೆಗಳನ್ನು ಕೂಗುತ್ತಾರೆ ಎಂದು ನಾನು ಅವರನ್ನು ಪ್ರಶ್ನಿಸಿದೆ. ನಿಸ್ಸಂದೇಹವಾಗಿ ಭಾರತ ತಂಡವನ್ನು ಎಂದು ಅವರೆಲ್ಲರೂ ಒಂದೇ ಧ್ವನಿಯಲ್ಲಿ ಉತ್ತರಿಸಿದರು. ಆದರೆ, ಇಂಗ್ಲೇಂಡ್ ತಂಡ ಬೇರೆ ತಂಡಗಳೊಂದಿಗೆ ಆಡುವಾಗ ಇಗ್ಲೇಂಡ್ ತಂಡಕ್ಕೆ ತಮ್ಮ ಸಮರ್ಥನೆ ಎಂದೂ ಸಹ ಅವರು ಸ್ಪಷ್ಟ ಪಡಿಸಿದರು. ತಾವು ಸದಾ ಭಾರತ ತಂಡದ ಪರ ವಿಜೃಂಭಿಸುವುದಾಗಿ ಹೇಳಿದ ಲಾರ್ಡ್ ಸ್ವರಾಜ್ ಪಾಲ್ ಅವರು, ಇಂಗ್ಲೇಂಡ್ ಹಾಗೂ ಭಾರತ ತಂಡಗಳು ಪರಸ್ಪರ ಆಡುವಾಗ, ಗೆಲ್ಲುತ್ತಿರುವ ತಂಡಕ್ಕೆ ತಮ್ಮ ಉತ್ತೇಜನ ನೀಡುವುದಾಗಿ ಹೇಳಿದ್ದರು.

ಕ್ರೀಡಾ ರಾಷ್ಟ್ರೀಯತೆ ಅಥವಾ ಕ್ರಿಕೆಟ್ ರಾಷ್ಟ್ರೀಯತೆಯು ಓರ್ವ ವ್ಯಕ್ತಿಯ ರಾಷ್ಟ್ರೀಯ ಪರಿಚಯದ ಅಂಗವಾಗಿರುತ್ತದೆ ಎಂದು ನಿರೂಪಿಸಲು ಮೇಲಿನ ವೃತ್ತಾಂತವನ್ನು ತಿಳಿಸಿದೆ. ಕ್ರೀಡಾ ಪ್ರೇಮಿಯು ರಾಷ್ಟ್ರೀಯತೆಯ ಹೊರತಾಗಿಯೂ ಓರ್ವ ಮಹಾನ್ ಕ್ರೀಡಾಪಟುವಿನ ಆಟದ ವೈಖರಿಯನ್ನು ಆನಂದಿಸಬಹುದು. ಕೆಲವು ಕ್ರೀಡಾಪಟುಗಳ ಆಟ ನಯನ ಮನೋಹರವಾಗಿರುತ್ತದೆ. ಆದರೆ ರಾಷ್ಟ್ರೀಯ ಹುರುಪನ್ನು ಹೊಂದಿದ ಸ್ಪರ್ಧಾತ್ಮಕ ಕ್ರಿಕೆಟ್ ಆಟವು ನಿಮ್ಮನ್ನು ನಿಮ್ಮ ಮೂಲ ರಾಷ್ಟ್ರೀಯ ತಂಡದ ಕಡೆ ಸೆಳೆಯುತ್ತದೆ. ವಿಶ್ವ ಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ತಮ್ಮ ದೇಶದ ತಂಡವನ್ನು ಹುರಿದುಂಬಿಸಲು ಫುಟ್‌ಬಾಲ್ ಪ್ರೇಮಿಗಳು ತಮ್ಮ ತಂಡದೊಂದಿಗೆ ಪ್ರಯಾಣಿಸುವುದನ್ನು ನಾನು ನೋಡಿದ್ದೇನೆ.

ಭಾರತ-ಪಾಕಿಸ್ತಾನ ಕ್ರಿಕೆಟ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಗಡಿಭಾಗವನ್ನು ಪರಿಗಣಿಸದೆ ಮಹಾನ್ ಕ್ರಿಕೆಟಿಗರ ಅದ್ಭುತ ಆಟವನ್ನು ಮೆಚ್ಚುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ, ತಮ್ಮನ್ನು ಒಂದು ಗುಂಪಿನೊಂದಿಗೆ ಗುರುತಿಸಿಕೊಂಡು ನಿರ್ದಿಷ್ಟ ಮಾದರಿಯಲ್ಲಿ ಪಾಕಿಸ್ತಾನದ ವಿಜಯವನ್ನು

ಆಚರಿಸಿದರೆ, ಅದು ಪಾಕಿಸ್ತಾನದ ಕ್ರೀಡಾ ಸಾಮರ್ಥ್ಯದ ಮುಗ್ಧ ಪ್ರಶಂಸೆ ಆಗಲಾರದು. ಅಂತಹ ಆಚರಣೆಗಳಲ್ಲಿ ರಾಜಕೀಯ ಬೆರೆಸಿದಂತಾಗುತ್ತದೆ. ಈ ಮಾದರಿ ಆಚರಣೆಯಲ್ಲಿ ತೊಡಗುವ ಯುವಕರಿಗೆ ಶಿಕ್ಷೆ ನೀಡಬೇಕೆ ಅಥವಾ ಕಾನೂನಿನ ಯಾವ ಕಲಂ ಅಡಿ ಅವರ ವಿರುದ್ಧ ಕ್ರಮತೆಗೆದುಕೊಳ್ಳಬೇಕು ಎಂಬುದು ಇಲ್ಲಿ ಮುಖ್ಯವಲ್ಲ. ಇಲ್ಲಿರುವ ಮುಖ್ಯ ವಿಚಾರವೆಂದರೆ, ಇಂಥಹ ವಿಕೃತ ಆಚರಣೆಗಳು ರವಾನಿಸುವ ರಾಜಕೀಯ ಸಂದೇಶಗಳು ಯಾವುದು.

ಇಂತಹ ಆಚರಣೆಗಳು ಸ್ವಾಭಾವಿಕವಾಗಿ ಹಲವರ ಮನಸ್ಸಿನಲ್ಲಿ ಸಂದೇಹ ಹುಟ್ಟಿಸುತ್ತದೆ. ಪರಸ್ಪರ ಸಂದೇಹ ಹುಟ್ಟಿಸುವ ಮಾನಸಿಕ ಪ್ರತ್ಯೇಕತಾ ಭಾವವನ್ನು ಮೂಡಿಸುತ್ತದೆ. ಅವರ ಸಂಕುಚಿತ ದೃಷ್ಟಿಕೋನಕ್ಕೆ ಭಿನ್ನವಾಗಿ ಆಲೋಚಿಸುವ ಅವರ ಸಮುದಾಯದವರೇ ಆದ ಸಹಸ್ರಾರು ಸುಸಂಸ್ಕೃತ ಜನರ ಕುರಿತ ಜನಾಭಿಪ್ರಾಯವನ್ನು ಹಾಳುಮಾಡುತ್ತಿದ್ದಾರೆ ಎಂದು ಅವರಿಗೆ ಅರ್ಥವಾಗದು. ಕೆಲವು ವರ್ಗದ ಜನರನ್ನು ಬೇರ್ಪಡಿಸುವ ಮನೋವೃತ್ತಿಯನ್ನು ಇದು ಬಿಂಬಿಸುತ್ತದೆ ಎಂಬ ವಾದವನ್ನು ಒಪ್ಪಲು ನಾನು ಸಿದ್ಧನಿಲ್ಲ. ಇದಕ್ಕೆ ಬದಲಾಗಿ, ಇಂಥಹವರನ್ನು ರಾಷ್ಟ್ರೀಯ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲಾಗುತ್ತದೆ. ಸುಸಂಸ್ಕೃತ ಭಾರತೀಯರು ಹಾಗೂ ವಿಶೇಷವಾಗಿ ಅವರ ಸಮುದಾಯದ ಸದಸ್ಯರು ದಾರಿತಪ್ಪಿದ ಯುವಕರಿಗೆ ಮಾರ್ಗದರ್ಶನ ನೀಡಿ, ಅವರ ಪ್ರತ್ಯೇಕತಾವಾದದಿಂದ ಸ್ವಯಂ ಘಾತಕ ಕೃತ್ಯವೆಸಗಿದಂತಾಗುತ್ತದೆ, ಅವರ ಸಮುದಾಯಕ್ಕೆ, ಅವರ ದೇಶಕ್ಕೆ ಕೆಡಕು ಬಗೆದಂತಾಗುತ್ತದೆ ಎಂದು ಬುದ್ಧಿಹೇಳಬೇಕು. ಇಲ್ಲದಿದ್ದರೆ ಕೇವಲ ಸೋಲು ಅನುಭವಿಸಿಬೇಕಾಗುತ್ತದೆ.

*********